**ಮಾನ್ಯ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್, ಇವರು ಕೋರಿರುವ ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿ ಡಿಸೆಂಬರ್ 2023ರ ಒಳಗೆ ತಮ್ಮ ಮುಂದೆ ಬಂದ ಎಲ್ಲಾ ದೂರುಗಳ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಆದೇಶಕ್ಕಾಗಿ ಕಾಯ್ದಿರಿಸಲಾಗಿದೆ. ಕಳೆದ 7 ತಿಂಗಳಿಂದ ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಇರುವ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ನಿಯಮ 72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಕಂದಾಯ ಸಚಿವರ ಹೇಳಿಕೆ:**

****

ತುಮಕೂರು ಜಿಲ್ಲೆ, ತಿಪಟೂರು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಸೆಪ್ಟಂಬರ್ 2023 ಮಾಹೆಯಿಂದ ಡಿಸೆಂಬರ್ 2023 ರವರೆಗೆ 541 ಪ್ರಕರಣಗಳು ದಾಖಲಾಗಿದ್ದು, ಹಿಂದಿನ ಪ್ರಕರಣಗಳು ಸೇರಿ ಒಟ್ಟು 609 ಪ್ರಕರಣಗಳನ್ನು ವಿಲೇ ಮಾಡಲಾಗಿರುತ್ತದೆ. ಆದೇಶಕ್ಕೆ ಕಾಯ್ದಿರಿಸದ ಪ್ರಕರಣಗಳ ಪೈಕಿ 2 ಪ್ರಕರಣಗಳನ್ನು ಮರು ವಿಚಾರಣೆಗೆ ಆದೇಶಿಸಲಾಗಿದೆ.

ಪ್ರಕರಣಗಳಲ್ಲಿ ಉಭಯತ್ರರರ ವಾದ ಆಲಿಸಿ ಸಾಕಷ್ಟು ಕಾಲಾವಕಾಶ ನೀಡಿ ಎರಡೂ ಪಕ್ಷಗಾರರು ಸಲ್ಲಿಸುವ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ ಸೂಕ್ತ ಆದೇಶ ಹೊರಡಿಸಲಾಗುತ್ತಿರುತ್ತದೆ. ಸೆಪ್ಟಂಬರ್, 2023 ಮಾಹೆಯಿಂದ ಡಿಸೆಂಬರ್, 2023ರವರೆಗೆ ಆದೇಶಕ್ಕೆ ಕಾಯ್ದಿರಿಸಿದ ಎಲ್ಲಾ ಪ್ರಕರಣಗಳನ್ನು ನಿಯಮಾನುಸಾರ ವಿಲೆ ಮಾಡಲಾಗಿರುತ್ತದೆ. ಜುಲೈ, 2024ರ ಮಾಹೆಯ ಅಂತ್ಯಕ್ಕೆ ಒಟ್ಟು 60 ಪ್ರಕರಣಗಳನ್ನು ಆದೇಶಕ್ಕೆ ಕಾಯ್ದಿರಿಸಲಾಗಿರುತ್ತದೆ.

| ತಿಪಟೂರು ಉಪವಿಭಾಗಕ್ಕೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳ ವಿವರ | | | |
|---|---|---|---|
| ಕ್ರ .ಸಂ. | ಕಛೇರಿಯ ಹೆಸರು | ವಿಚಾರಣೆ ಮುಕ್ತಾಯವಾಗಿ ಆದೇಶಕ್ಕೆ ಕಾಯ್ದಿರಿಸಿದ ಪ್ರಕರಣಗಳ ಸಂಖ್ಯೆ. | ಷರಾ |
| 01 | ತಹಶೀಲ್ದಾರ್‌ರವರ ನ್ಯಾಯಾಲಯ, ತಿಪಟೂರು ತಾಲ್ಲೂಕು. | 3 | ಜೂನ್ ಮತ್ತು ಜುಲೈ ತಿಂಗಳಲ್ಲಿ ಆದೇಶಕ್ಕಾಗಿ ಕಾಯ್ದಿರಿಸಿರುವ ಪ್ರಕರಣಗಳು |
| 02 | ತಹಶೀಲ್ದಾರ್‌ರವರ ನ್ಯಾಯಾಲಯ, ತುರುವೇಕೆರೆ ತಾಲ್ಲೂಕು. | 5 | |
| 03 | ತಹಶೀಲ್ದಾರ್‌ರವರ ನ್ಯಾಯಾಲಯ, ಚಿಕ್ಕನಾಯಕನಹಳ್ಳಿ ತಾಲ್ಲೂಕು. | 17 | |

**ಕಂಇ 165 ವಿಕೋವಿ 2024**

**(ಕೃಷ್ಣ ಭೈರೇಗೌಡ)**
ಕಂದಾಯ ಸಚಿವರು